# ಅಂತರ್ಜಾಲ ದುರ್ಬಳಕೆ: ಪ್ರತ್ಯೇಕ ಕಾಯಿದೆ ಅಗತ್ಯ

**ವಿಕ ಸುದ್ದಿಲೋಕ**

ಬೆಂಗಳೂರು: ಹೆಚ್ಚುತ್ತಿರುವ ಇಂಟರ್‌ನೆಟ್ ದುರ್ಬಳಕೆ ತಡೆಗಟ್ಟಲು ಪ್ರತ್ಯೇಕ 'ಗೌಪ್ಯ ಕಾಯಿದೆ' ಜಾರಿಗೊಳಿಸುವ ಅಗತ್ಯವಿದೆ ಎಂದು ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಎಸ್. ಸುರೇಶ್ ಕುಮಾರ್ ಅಭಿಪ್ರಾಯಪಟ್ಟಿದ್ದಾರೆ.

ಡಿಜಿಟಲ್ ಸೊಸೈಟಿ ಫೌಂಡೇಷನ್ ಆಫ್ ಇಂಡಿಯಾ ಸಂಸ್ಥೆಯು ಕೆಎಲ್‌ಇ ಕಾನೂನು ಕಾಲೇಜು ಸಹಯೋಗದಲ್ಲಿ 'ಗೌಪ್ಯತೆ ಹಕ್ಕು ಮತ್ತು ಸೈಬರ್ ಸ್ಪೇಸ್ ಮಾಹಿತಿ ರಕ್ಷಣೆ' ಕುರಿತು ನಗರದಲ್ಲಿ ಶುಕ್ರವಾರ ಆಯೋಜಿಸಿದ್ದ ರಾಷ್ಟ್ರೀಯ ವಿಚಾರ ಸಂಕಿರಣ ಉದ್ಘಾಟಿಸಿ ಮಾತನಾಡಿದರು.

ನೆಟ್‌ನಲ್ಲಿ ಮುಕ್ತವಾಗಿ ಸಿಗುವ ಮಾಹಿತಿಯ ದುರುಪಯೋಗ ಹೆಚ್ಚುತ್ತಿದೆ. ಉಗ್ರರ ವಿಧ್ವಂಸಕ ಕೃತ್ಯಕ್ಕೆ ಮಾಹಿತಿ ಅನುಕೂಲವಾಗುತ್ತಿದೆ. ಹೀಗಿರುವಾಗ, ಸೈಬರ್ ಅಪರಾಧ ಮತ್ತು ವೈಯಕ್ತಿಕ ಮಾಹಿತಿ ಸೋರಿಕೆಯಾಗುತ್ತಿದೆ.



ಈ ಹಿನ್ನೆಲೆಯಲ್ಲಿ ಸೈಬರ್ ಸ್ಪೇಸ್ ಮಾಹಿತಿಯ ಸುರಕ್ಷತೆ ಬಗ್ಗೆ ಎಚ್ಚರ ವಹಿಸುವ ಅಗತ್ಯವಿದೆ ಎಂದರು.

ಅಂತರ್ಜಾಲ, ದೃಶ್ಯ ಮಾಧ್ಯಮದಲ್ಲಿ ವೈಯಕ್ತಿಕ ಬದುಕಿನ ಮೇಲಿನ ದಾಳಿ ಮಿತಿಮೀರಿ ಹೋಗಿದೆ. ರಹಸ್ಯ ಮಾಹಿತಿಯ ಬಹಿರಂಗ ಪ್ರವೃತ್ತಿಯಿಂದ ಕೌಟುಂಬಿಕ ಮತ್ತು ಸಾಮಾಜಿಕ ಬದುಕಿನ ಮೇಲೂ ಕೆಟ್ಟ ಪರಿಣಾಮ ಬೀರುವ ಸಾಧ್ಯತೆಯಿದೆ. ಈ ನಿಟ್ಟಿನಲ್ಲಿ ಕೇಂದ್ರ ಸರಕಾರ 'ಗೋಪ್ಯತೆ ಹಕ್ಕು ಹಾಗೂ ಸೈಬರ್ ಸ್ಪೇಸ್ ಮಾಹಿತಿ ರಕ್ಷಣೆ' ಕುರಿತು ವಿಧೇಯಕ ಮಂಡಿಸಲು ಮುಂದಾಗಿರುವುದು ಸ್ವಾಗತಾರ್ಹ ಎಂದು ನುಡಿದರು.

ಡಿಜಿಟಲ್ ಸೊಸೈಟಿಯ ಅಧ್ಯಕ್ಷ ನಾವಿ ಮಾತನಾಡಿ, ಸೈಬರ್ ಸ್ಪೇಸ್‌ನಲ್ಲಿನ ವೈಯಕ್ತಿಕ ಮಾಹಿತಿಯ ಸುರಕ್ಷತೆಗೆ ಪ್ರತ್ಯೇಕ ಕಾನೂನು ರೂಪಿಸಬೇಕು. ಸೈಬರ್ ಅಪರಾಧಕ್ಕೆ ಸಂಬಂಧಿಸಿದಂತೆ ಪೊಲೀಸರು ಗೌಪ್ಯ ವಿಚಾರಗಳನ್ನು ಬಹಿರಂಗಗೊಳಿಸದಂತೆ ನಿರ್ಬಂಧಿಸಬೇಕು. ಸೈಬರ್ ಸ್ಪೇಸ್ ಚಟುವಟಿಕೆ, ಅವುಗಳ ನಿಯಂತ್ರಣಕ್ಕೆ ಕರ್ನಾಟಕವನ್ನು ಸೈಬರ್ ಸ್ಪೇಸ್ ಹಬ್ ಆಗಿ ಬೆಳೆಸಬೇಕೆಂದು ಹೇಳಿದರು.

ಕಿಲ್ಬರ್ ಸಂಸ್ಥೆಯ ನಿರ್ದೇಶಕ ಜಿ. ದಕ್ಷಿಣಾಮೂರ್ತಿ, ಕೆಎಲ್‌ಇ ಕಾನೂನು ಕಾಲೇಜಿನ ಪ್ರಾಂಶುಪಾಲ ಜಿ.ಎಂ. ಮಲ್ಲಿಕಾರ್ಜುನಯ್ಯ ಉಪಸ್ಥಿತರಿದ್ದರು.